

# ಯುವತಿಯರ ಪ್ಲಾಟಿನಂ ಪ್ರೀತಿ

**ಈಗೀಗ ಯುವತಿಯರನ್ನು ಹೆಚ್ಚಾಗಿ ಸೆಳೆಯುತ್ತಿರುವುದು ಪ್ಲಾಟಿನಂ ಆಭರಣ. ವಿನೂತನ ವಿನ್ಯಾಸ ವಧೂವರರನ್ನೂ ಸೆಳೆಯುತ್ತಿವೆ. ಪಾರ್ಟಿ, ಶುಭ ಸಮಾರಂಭ, ಪಾರ್ಟಿಗಳಿಗೆ ಪ್ಲಾಟಿನಂ ಆಭರಣ ‘ಸ್ಪೆಷಲ್’ ಎನಿಸುತ್ತಿದೆ.**

**ಯು.ಎ.**

ಆಕರ್ಷಕ ಲುಕ್ ನೀಡುವ ಕಾರಣಕ್ಕಾಗಿ ಪ್ಲಾಟಿನಂ ಆಭರಣ ಈಗೀಗ ಯುವತಿಯರನ್ನು ಬಹುವಾಗಿ ಸೆಳೆಯುತ್ತಿದೆ. ವಜ್ರ, ಚಿನ್ನ, ಬೆಳ್ಳಿ ಆಭರಣಗಳಿಗಿಂತಲೂ ಪ್ಲಾಟಿನಂ ಈಗ ಟ್ರೆಂಡ್ ಆಗಿದೆ. ನೆಕ್ಲೇಸ್, ಕಿವಿಯೋಲೆ, ಪೆಂಡೆಂಟ್, ಉಂಗುರಗಳ ಜತೆಗೆ ಈಗೀಗ ಬ್ರೈಡಲ್ ಒಡವೆಗಳು ಲಭ್ಯವಿದ್ದು, ನವವಿವಾಹಿತ ಜೋಡಿಗಳಿಗೆ ಹೇಳಿ ಮಾಡಿಸಿದಂತಿದೆ.

ಪ್ಲಾಟಿನಂ ಒಡವೆ ವಿದೇಶದಲ್ಲಿ ಬಹಳ ಖ್ಯಾತಿ. ಮದುವೆಯಾಗುವ ಹುಡುಗ–ಹುಡುಗಿ ಉಂಗುರ ಬದಲಾಯಿಸಿಕೊಳ್ಳಲು ಬಳಸುವುದು ಪ್ಲಾಟಿನಂ ಅನ್ನೇ. ಇದಕ್ಕೆ ಕಾರಣ ಪ್ಲಾಟಿನಂ ಒಡವೆಗಳಲ್ಲಿ ಹಲವು ಸೂಕ್ಷ್ಮ ಕುಸುರಿಗಳಿದ್ದು, ತಕ್ಷಣ ಸೆಳೆಯುವಂತಿರುವುದು. ಪ್ಲಾಟಿನಂ ಸಂಗ್ರಹದಲ್ಲಿ ಹಲವು ವೈವಿಧ್ಯಗಳಿವೆ. ಗಾಢವಾಗಿ ಎದ್ದುಕಾಣುವಂಥ ಸೊಬಗಿದೆ. ಮಹಿಳೆಯರಲ್ಲಿ ‘ಆಧುನಿಕ ಸ್ತ್ರೀತ್ವ’ ಮತ್ತು ಪುರುಷರಲ್ಲಿ ‘ಧೈರ್ಯಶಾಲಿ ಗುಣ’ಗಳನ್ನು ಈ ಒಡವೆ ಬಿಂಬಿಸುತ್ತದೆ ಎಂಬುದು ಪ್ಲಾಟಿನಂ ವರ್ತಕರ ಅಂಬೋಣ.

‘ಬ್ರೈಡಲ್ ಸಂಗ್ರಹ ಇಂದಿನ ವಧುವಿನ ವಿವಾಹ ನಂತರದ ಜೀವನಶೈಲಿಗೆ ಪೂರಕವಾಗಿವೆ. ಈ ಸಂಗ್ರಹದಲ್ಲಿನ ಪುರುಷರ ಆಭರಣಗಳು ಜ್ಯಾಮಿತಿಯ ರೂಪಗಳಿಂದ ಸ್ಫೂರ್ತಿ ಪಡೆದಿದ್ದು ರೇಖೆಗಳು, ರಚನೆಗಳು ಮತ್ತು ದ್ವಂದ್ವ ಟೋನ್‌ಗಳ ಸಮ್ಮಿಲನ ಎದ್ದು ಕಾಣುತ್ತದೆ’ ಎನ್ನುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಪ್ಲಾಟಿನಂ ಒಡವೆ ಮಳಿಗೆ ಮಾಲಿಕ ಚಂದನ್‌ಲಾಲ್.

‘ಪ್ಲಾಟಿನಂ ಒಡವೆ ವಿನ್ಯಾಸಗಳು ಭಾರತೀಯ ಮತ್ತು ಪಾಶ್ಚಿಮಾತ್ಯ ಉಡುಪುಗಳೊಂದಿಗೆ ಹೊಂದಿಕೊಳ್ಳುತ್ತವೆ. ವಿರಳವಾದ ಮತ್ತು ಅಪೂರ್ವವಾದ ಪ್ಲಾಟಿನಂ ಒಡವೆ ತೊಟ್ಟುಕೊಳ್ಳಲು ಆರಾಮದಾಯಕ’ ಎಂದು ಹೇಳುತ್ತಾರೆ ಅವರು.



‘ಪ್ಲಾಟಿನಂನಲ್ಲಿ ಅನನ್ಯ ಮತ್ತು ಸಮಕಾಲೀನ ವಿನ್ಯಾಸಗಳಿವೆ. ಆಧುನಿಕ ಮನೋಭಾವದ ವಧೂವರರು ಭಾವನಾತ್ಮಕತೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಪ್ಲಾಟಿನಂ ಆಭರಣ ‘ಪ್ರೀತಿಯ ಸಂಕೇತ’ ಎಂಬ ಪರಿಕಲ್ಪನೆಯನ್ನೂ ಬಿಂಬಿಸುವ ಕಾರಣ ಹೆಚ್ಚಿನ ವಿವಾಹ ಆಕಾಂಕ್ಷಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ’ ಎಂಬುದು ಚಂದನ್‌ಲಾಲ್ ವಿವರಣೆ.

‘ಪ್ಲಾಟಿನಂ ಆಭರಣದಲ್ಲಿ ಹಲವಾರು ಆಯ್ಕೆಗಳಿವೆ. ಇದರಲ್ಲಿ ಪರಿಶುದ್ಧ ಗುಣ ಸ್ನೇಹ, ಪ್ರೀತಿ, ಬಾಂಧವ್ಯ ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಬ್ಬರು ವ್ಯಕ್ತಿ ಹಾಗೂ ಅವರ ಕುಟುಂಬಗಳ ನಡುವಿನ ಆಳವಾದ ಪ್ರೀತಿ, ವಿಶ್ವಾಸ, ಪರಸ್ಪರ ಸಂಬಂಧ ಎಲ್ಲವನ್ನೂ ಪ್ಲಾಟಿನಂ ಆಭರಣ ಬೆಸೆಯುವ ಕಾರಣ ಗ್ರಾಹಕರಿಗೆ ಇಷ್ಟವಾಗುತ್ತಿದೆ. ಪ್ಲಾಟಿನಂ ಲವ್ ಬ್ಯಾಂಡ್ ಆಧುನಿಕ ಮನೋಭಾವದ ಯುವಕ–ಯುವತಿಯರಿಗೆ ಹಾಟ್ ಫೇವರೆಟ್ ಎನಿಸಿದೆ’ ಎಂದು ಹೇಳುತ್ತಾರೆ ಅವರು.